## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಜಿಎಮ್/2093/2022
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 10/03/2023.

### ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

**ವಿಷಯ:** ಶ್ರೀ ಜಾಕೀರ್‌ಹುಸೇನ್ ಕುಕನೂರ ತಂದೆ ರಾಜೇಸಾಬ, ಸರಕಾರಿ ಪ್ರೌಢಶಾಲಾ ಸಹ ಶಿಕ್ಷಕರು, ನಿಯೋಜನೆಯ ಮೇರೆಗೆ ಜಿಲ್ಲಾ ಅಧಿಕಾರಿಗಳು, ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಕಛೇರಿ, ಕೊಪ್ಪಳ ಜಿಲ್ಲೆ (ಹೆಚ್ಚುವರಿ ಪ್ರಭಾರ) ಗದಗ ಜಿಲ್ಲೆ, ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

ಗದಗ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ, ಪೋಲೀಸ್ ಠಾಣೆಯ ಆರಕ್ಷಕ ಉಪಾಧೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಜಾಕೀರ್‌ಹುಸೇನ್ ಕುಕನೂರ ತಂದೆ ರಾಜೇಸಾಬ, ಸರಕಾರಿ ಪ್ರೌಢಶಾಲಾ ಸಹ ಶಿಕ್ಷಕರು, ನಿಯೋಜನೆಯ ಮೇರೆಗೆ ಜಿಲ್ಲಾ ಅಧಿಕಾರಿಗಳು, ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಕಛೇರಿ, ಕೊಪ್ಪಳ ಜಿಲ್ಲೆ (ಹೆಚ್ಚುವರಿ ಪ್ರಭಾರ) ಗದಗ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ಫಾರೂಖ್‌ಅಹ್ಮದ್ ಬಿದರಕುಂದಿ ಬಿನ್ ಖಾನಸಾಬ, ಸರಸ್ವತಿ ನಗರ, ನರಗುಂದ, ಗದಗ ಜಿಲ್ಲೆ (ಇನ್ನು ಮುಂದೆ 'ದೂರುದಾರರು'

ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿರುತ್ತಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2. <u>ಪ್ರಕರಣದ ಸಂಕ್ಷಿಪ್ತ ಸಾರಾಂಶ:</u>

ದೂರುದಾರರು ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ಸಬ್ಸಿಡಿ ಪಡೆದು ಬ್ಯಾಂಕ್ ಸಾಲದಿಂದ ಟ್ಯಾಕ್ಸಿ ಖರೀದಿಸುವ ಸಲುವಾಗಿ 2018-19 ನೇ ಸಾಲಿನಲ್ಲಿ ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ದಿನಾಂಕ 31/08/2018 ರಂದು ಆನ್‌ಲೈನ್ ಮೂಲಕ ಅರ್ಜಿ ಹಾಕಿ ಸಂಬಂಧಿಸಿದ ದಾಖಲಾತಿಗಳನ್ನು ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಗೆ ಕೊಟ್ಟಿರುತ್ತಾರೆ. ಜಿಲ್ಲಾಧಿಕಾರಿಗಳು, ಗದಗ ಇವರು ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ಪಟ್ಟಿಗಳಲ್ಲಿ ದೂರುದಾರರೂ ಸಹ ಆಯ್ಕೆಯಾಗಿರುತ್ತಾರೆ.

3. ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ಸಬ್ಸಿಡಿ ಹಣದ ಚೆಕ್ಕನ್ನು ಸಂಬಂಧಿಸಿದ ಬ್ಯಾಂಕುಗಳಿಗೆ ಕಳುಹಿಸುವ ಸಲುವಾಗಿ ದೂರುದಾರರು ಸುಮಾರು ಒಂದುವರೆ ವರ್ಷದಿಂದ ಕೆ.ಎಂ.ಡಿ.ಸಿ. ಗದಗ ಕಛೇರಿಗೆ ಅಲೆದಾಡಿರುತ್ತಾರೆ. ಚೆಕ್ ಬಂದ ನಂತರ ಬ್ಯಾಂಕಿಗೆ ಕಳುಹಿಸುತ್ತೇವೆ ಅಥವಾ ಚೆಕ್ಕನ್ನು ತಮಗೆ ಕೊಡುತ್ತೇವೆ ಎಂದು

ಕೆ.ಎಂ.ಡಿ.ಸಿ. ಗದಗ ಕಛೇರಿಯ ಕಂಪ್ಯೂಟರ್ ಆಪರೇಟರ್ ಆದ ಅಕ್ಬರ್ ಎಂಬವರು ದೂರುದಾರರಿಗೆ ಹೇಳಿರುತ್ತಾರೆ.

4. ಈಗ ಸುಮಾರು ಒಂದು ವಾರದ ಹಿಂದೆ ಕೆ.ಎಂ.ಡಿ.ಸಿ. ಗದಗ ಕಛೇರಿಯ ಅಕ್ಬರ್ ಮತ್ತು ಜಿಲ್ಲಾ ವ್ಯವಸ್ಥಾಪಕರಾದ ಎದುರುದಾರರು ದೂರುದಾರರಿಗೆ ಫೋನ್ ಮಾಡಿ ಕಛೇರಿಗೆ ಬಂದು ಭೇಟಿಯಾಗಲು ತಿಳಿಸಿದಂತೆ ದೂರುದಾರರು ಕೆ.ಎಂ.ಡಿ.ಸಿ. ಗದಗ ಕಛೇರಿಗೆ 14/05/2020 ರಂದು ಹೋದಾಗ ಕಛೇರಿಯ ಅಕ್ಬರ್ ಮತ್ತು ಎದುರುದಾರರು ಸಬ್ಸಿಡಿ ಹಣದ ಚೆಕ್ ಕೊಡಲು ರೂ. 50,000/-ಗಳನ್ನು ಲಂಚವಾಗಿ ಕೊಡಬೇಕೆಂದು ಕೇಳಿರುತ್ತಾರೆ. ದೂರುದಾರರು ಅಷ್ಟು ಹಣ ಕೊಡಲು ಆಗುವುದಿಲ್ಲ ಎಂದು ಹೇಳಿದ್ದಲ್ಲದೆ ನಂತರ 2-3 ಬಾರಿ ಕೆ.ಎಂ.ಡಿ.ಸಿ. ಗದಗ ಕಛೇರಿಗೆ ಹೋಗಿ ಲಂಚದ ಹಣ ಕಡಿಮೆ ಮಾಡಿಕೊಳ್ಳಲು ಕೇಳಿಕೊಂಡಾಗ ರೂ. 50,000/- ತಂದು ಕೊಡಲೇ ಬೇಕೆಂದು ಹೇಳಿರುತ್ತಾರೆ. ನಂತರ ದೂರುದಾರರು ದಿನಾಂಕ 21/05/2020 ರಂದು ಮಧ್ಯಾಹ್ನ 12-30 ಘಂಟೆ ಸುಮಾರಿಗೆ ಕೆ.ಎಂ.ಡಿ.ಸಿ. ಗದಗ ಕಛೇರಿಗೆ ಹೋಗಿ ಲಂಚದ ಹಣ ಕಡಿಮೆ ಮಾಡಲು ಅಕ್ಬರ್ ಮತ್ತು ಎದುರುದಾರರಿಗೆ ಕೇಳಿಕೊಂಡಾಗ ಕೊನೆಗೆ ರೂ. 45,000/- ಗಳನ್ನು ಈ ದಿನವೇ ತಂದು ಕೊಡುವಂತೆ ತಿಳಿಸಿರುತ್ತಾರೆ. ದೂರುದಾರರು ತಮಗೆ ರೂ. 40,000/- ಗಳಷ್ಟು ಕೊಡಲು ಸಾಧ್ಯವಾಗುತ್ತದೆ ಎಂದು ಹೇಳಿದಾಗ ಅಕ್ಬರ್ ಇವರು ರೂ. 40,000/- ಗಳನ್ನು ತಂದು ಕೊಡು ನಾನು ರೂ. 5,000/- ಹಾಕುತ್ತೇನೆ, ಚೆಕ್ ಒಯ್ಯುವಾಗ ರೂ. 5,000/- ಕೊಟ್ಟು ಚೆಕ್ಕನ್ನು ಒಯ್ಯಲು ತಿಳಿಸಿರುತ್ತಾರೆ. ಈ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

5. ದಿನಾಂಕ 23/05/2020 ರಂದು 4ನೇ ಶನಿವಾರ ಇದ್ದು, ದಿನಾಂಕ 24/05/2020 ರಂದು ರವಿವಾರ ಹಾಗೂ ದಿನಾಂಕ 25/05/2020 ರಂದು ರಂಜಾನ್ ಹಬ್ಬದ ಸಲುವಾಗಿ ರಜೆ ಇದ್ದ ಕಾರಣ ಈ ದಿನ ದೂರುದಾರರು ಎ.ಸಿ.ಬಿ. ಠಾಣೆಗೆ ಬಂದಿರುತ್ತಾರೆ.

6. ಕೆ.ಎಂ.ಡಿ.ಸಿ. ಗದಗ ಕಛೇರಿಯ ಎದುರುದಾರರು ಗದಗ ಹಾಗೂ ಕೊಪ್ಪಳ ಜಿಲ್ಲೆಯ ಎರಡೂ ಕಛೇರಿಯ ಕಾರ್ಯ ನಿರ್ವಹಣೆ ಮಾಡುತ್ತಿದ್ದು, ಕೊಪ್ಪಳ ಕಛೇರಿಯಲ್ಲಿ ಸೋಮವಾರ, ಮಂಗಳವಾರ ಹಾಗೂ ಬುಧವಾರ ಕೆಲಸ ಮಾಡುತ್ತಿದ್ದು, ಇನ್ನುಳಿದ ದಿನಗಳಲ್ಲಿ ಎದುರುದಾರರು ಗದಗ ಜಿಲ್ಲೆಯ ಕಛೇರಿಯಲ್ಲಿ ಕೆಲಸ ಮಾಡುತ್ತಿರುತ್ತಾರೆ.

7. ಸರ್ಕಾರದಿಂದ ಅಲ್ಪ ಸಂಖ್ಯಾತ ವರ್ಗದವರಿಗೆ ಟ್ಯಾಕ್ಸಿ ಖರೀದಿಸಲು ಪಡೆಯುವ ಬ್ಯಾಂಕ್ ಸಾಲಕ್ಕೆ ಕೆ.ಎಂ.ಡಿ.ಸಿ. ನಿಗಮದಿಂದ ಸಬ್ಸಿಡಿ ಹಣ ರೂ. 3 ಲಕ್ಷ ಮಂಜೂರು ಮಾಡಲು ಕೆ.ಎಂ.ಡಿ.ಸಿ. ಗದಗ ಕಛೇರಿಯ ಜಿಲ್ಲಾ ವ್ಯವಸ್ಥಾಪಕರು ಮತ್ತು ಕಂಪ್ಯೂಟರ್ ಆಪರೇಟರ್ ಅಕ್ಬರ್ ಇವರ ಜೊತೆಗೂಡಿ ರೂ. 40,000/- ಲಂಚ ಕೊಡಬೇಕೆಂದು ಕೇಳಿದ್ದರ ಮೇರೆಗೆ ಎದುರುದಾರರು ಹಾಗೂ ಅಕ್ಬರ್‌ರವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿ ದೂರುದಾರರು ದಿನಾಂಕ 26/05/2020 ರಂದು ಬೆಳಿಗ್ಗೆ 8-45 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಗದಗ ಪೋಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೋಲೀಸ್ ಠಾಣೆಯಲ್ಲಿ ಮೊ. ಸಂ. 07/2020 ಪಿ.ಸಿ. ಕಾಯಿದೆ ಕಲಂ

7(a) (A) ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

8. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ವಿನೋದಕುಮಾರ ತಂದೆ ತುಕಾರಾಂ ದಾಸರಿ ಮತ್ತು ಶ್ರೀ ಸಂತೋಷ ತಂದೆ ವೀರಪ್ಪ ಶೇಷಗಿರಿರವರನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯ ಮಾಡಿಕೊಂಡು ಹಾಗೂ ದೂರುದಾರರಿಗೆ ಅವರ ಪರಿಚಯ ಮಾಡಿಸಿ ಪಂಚರಿಗೆ ದೂರಿನ ಪ್ರತಿಯನ್ನು ಹಾಗೂ ಪ್ರಥಮ ವರ್ತಮಾನ ವರದಿಯನ್ನು ತೋರಿಸಿ, ದೂರನ್ನು ಓದಿ ಹೇಳಿದ ಮೇಲೆ ಪಂಚರು ದೂರುದಾರರಿಗೆ ದೂರಿನ ವಿಷಯದ ಬಗ್ಗೆ ಕೇಳಿದಾಗ ದೂರುದಾರರು ದೂರಿನಲ್ಲಿ ನೀಡಿರುವ ಎಲ್ಲಾ ಅಂಶಗಳು ನಿಜವಾಗಿರುತ್ತವೆ ಎಂದು ತಿಳಿಸಿರುತ್ತಾರೆ.

9. ತನಿಖಾಧಿಕಾರಿಗಳಿಗೆ ಎದುರುದಾರರು ಬೇಡಿಕೆ ಇಟ್ಟಿರುವ ಲಂಚದ ಹಣವಾದ ರೂ. 40,000/- ಗಳನ್ನು ಹಾಜರುಪಡಿಸಲು ತಿಳಿಸಿದಾಗ ದೂರುದಾರರು ತಾವು ಧರಿಸಿದ್ದ ಜೀನ್ಸ್ ಪ್ಯಾಂಟಿನ ಮುಂದಿನ ಬಲಭಾಗದ ಜೇಬಿನಿಂದ ರೂ. 2,000/- ಮುಖಬೆಲೆಯ 20 ನೋಟುಗಳನ್ನು ತೆಗೆದು ತನಿಖಾಧಿಕಾರಿಯವರ ಮುಂದಿನ ಟೇಬಲ್ ಮೇಲೆ ಹಾಜರುಪಡಿಸಿದಾಗ ಪಂಚಸಾಕ್ಷಿ-2 ರವರಾದ ಸಂತೋಷ ಶೇಷಗಿರಿರವರು ಹೇಳಿದಂತೆ ಪಂಚಸಾಕ್ಷಿ-1 ರವರಾದ ವಿನೋದ ಕುಮಾರ ದಾಸರಿರವರು ಸದರಿ ನೋಟುಗಳ ಮೌಲ್ಯ ಮತ್ತು ನಂಬರ್‌ಗಳನ್ನು ಒಂದು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ.

10. ತನಿಖಾಧಿಕಾರಿಯವರ ಸಿಬ್ಬಂದಿಯವರು ಸದರಿ ನೋಟುಗಳಿಗೆ ತೆಳುವಾಗಿ ಪಿನಾಪ್ತಲಿನ್ ಪುಡಿಯ ಲೇಪನ ಮಾಡಿರುತ್ತಾರೆ. ನಂತರ ಪಂಚಸಾಕ್ಷಿ-2 ರವರು ದೂರುದಾರರ ಅಂಗ ಶೋಧನೆ ಮಾಡಿ ದೂರುದಾರರು ಧರಿಸಿದ್ದ ಫುಲ್ ತೋಳಿನ ಶರ್ಟಿಗೆ ಜೇಬುಗಳೇ ಇಲ್ಲದ ಕಾರಣ ದೂರುದಾರರ ಜೀನ್ಸ್ ಪ್ಯಾಂಟನ್ನು ಪರಿಶೀಲನೆ ಮಾಡಿದಾಗ ಪ್ಯಾಂಟಿನ ಮುಂಬದಿಯ ಎಡಭಾಗದ ಜೇಬಿನಲ್ಲಿ ಮೊಬೈಲ್, ಈ ಪ್ರಕರಣದ ಎಫ್.ಐ.ಆರ್. ಪ್ರತಿ ಹಾಗೂ ಪ್ಯಾಂಟಿನ ಹಿಂಬದಿಯ ಬಲಬಾಗದ ಜೇಬಿನಲ್ಲಿ ಪರ್ಸ್, ಎಡ ಜೇಬಿನಲ್ಲಿ ಕರ್ಚೀಫ್ ಇರುತ್ತವೆ.

11. ಪಂಚಸಾಕ್ಷಿ-2 ಇವರು ತಯಾರಿಸಿಟ್ಟಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತಮ್ಮ ಕೈಗಳನ್ನು ಅದ್ದಿ ತೊಳೆದುಕೊಂಡಾಗ ದ್ರಾವಣದ ಬಣ್ಣದಲ್ಲಿ ಬದಲಾವಣೆಯಾಗಿರುವುದಿಲ್ಲ. ನಂತರ ಅವರು ತಮ್ಮ ಕೈಗಳನ್ನು ಕರವಸ್ತ್ರದಿಂದ ವರೆಸಿಕೊಂಡು ಟೇಬಲ್ ಮೇಲಿದ್ದ ಪಿನಾಪ್ತಲಿನ್ ಪುಡಿ ಸವರಿದ ನೋಟುಗಳನ್ನು ತೆಗೆದುಕೊಂಡು, ಆ ನೋಟುಗಳನ್ನು ಎಣಿಸಿ, ದೂರುದಾರರು ಧರಿಸಿದ್ದ ಜೀನ್ಸ್ ಪ್ಯಾಂಟಿನ ಖಾಲಿ ಇದ್ದ ಬಲಭಾಗದ ಮುಂದಿನ ಜೇಬಿನಲ್ಲಿಟ್ಟ ನಂತರ ತಮ್ಮ ಎರಡೂ ಹಸ್ತದ ಕೈಬೆರಳುಗಳನ್ನು ತಯಾರಿಸಿಟ್ಟಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದುಕೊಂಡಾಗ, ಬಣ್ಣ ರಹಿತವಾದ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ.

12. ನಂತರ ಲಂಚದ ಬೇಡಿಕೆಗೆ ಸಂಬಂಧಿಸಿದಂತೆ ಕೆ.ಎಂ.ಡಿ.ಸಿ. ಗದಗ ಕಛೇರಿಯ ಜಿಲ್ಲಾ ವ್ಯವಸ್ಥಾಪಕರಾದ ಎದುರುದಾರರು ಹಾಗೂ ಕಂಪ್ಯೂಟರ್ ಆಪರೇಟರ್ ಆದ ಅಕ್ಬರ್ ಮತ್ತು ದೂರುದಾರರ ಮಧ್ಯ ದಿನಾಂಕ 21/05/2020ರಂದು ಜರುಗಿದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿದ್ದ ಮೊಬೈಲ್‌ನ್ನು ತನಿಖಾಧಿಕಾರಿಯವರ ಸೂಚನೆಯಂತೆ ದೂರುದಾರರ ಹಾಜರುಪಡಿಸಿದ್ದು, ಸದರಿ ಮೊಬೈಲ್‌ನಲ್ಲಿ ದೂರುದಾರರು ತೋರಿಸಿದ ರೆಕಾರ್ಡ್ ಆದ ಸಂಭಾಷಣೆಗಳ ಭಾಗವನ್ನು ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರ ಮೂಲಕ ಲ್ಯಾಪ್ ಟಾಪ್‌ಗೆ ವರ್ಗಾಯಿಸಿಕೊಂಡು ದೂರುದಾರರ ಮೊಬೈಲ್‌ನ್ನು ಅವರಿಗೆ ಮರಳಿಸಿರುತ್ತಾರೆ. ಲ್ಯಾಪ್‌ಟಾಪ್‌ನಲ್ಲಿ ಸಂಗ್ರಹವಾದ ಸಂಭಾಷಣೆಯನ್ನು ತನಿಖಾಧಿಕಾರಿಯವರು ಪಂಚರಿಗೆ ಕೇಳಿಸಿ ಸಂಭಾಷಣೆಯ ಭಾಗವನ್ನು ಲ್ಯಾಪ್‌ಟಾಪ್‌ದಿಂದ ಸಿ.ಡಿ.ಗೆ ಕಾಪಿ ಮಾಡಿಕೊಂಡು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

13. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರು ಮತ್ತು ಕಂಪ್ಯೂಟರ್ ಆಪರೇಟರ್ ಆದ ಅಕ್ಬರ್‌ರವರು ಎಲ್ಲಿ ಸಿಗುತ್ತಾರೆಂದು ಕೇಳಿದಾಗ ದೂರುದಾರರು ಇವತ್ತು ಮಂಗಳವಾರವಿದ್ದು ಬಹುಶ: ಎದುರುದಾರರು ಕೊಪ್ಪಳಕ್ಕೆ ಹೋಗಿರುತ್ತಾರೆಂದು ತಿಳಿಸಿದಾಗ ತನಿಖಾಧಿಕಾರಿಯವರು ಡಿ.ಎಸ್.ಪಿ. ರವರ ಅನುಮತಿ ಪಡೆದು ಇನ್ನೊಬ್ಬ ಪೋಲೀಸ್ ಇನಸ್ಪೆಕ್ಟರ್ ಆದ ಶ್ರೀ ವೈ. ಎಸ್. ಧರನಾಯಕ ಇವರಿಗೆ

ಚಾಲಕನಾದ ವೀರೇಶ ಜೋಳದ್ ರವರೊಂದಿಗೆ ಕೊಪ್ಪಳಕ್ಕೆ ಹೋಗಿ ಮುಂದಿನ ಸೂಚನೆಗಾಗಿ ಕಾಯುವಂತೆ ತಿಳಿಸಿ ಕಳುಹಿಸಿರುತ್ತಾರೆ.

14. ತನಿಖಾಧಿಕಾರಿಯವರು ದೂರುದಾರರಿಗೆ ಕೆ.ಎಂ.ಡಿ.ಸಿ. ಕಛೇರಿಗೆ ಹೋಗಿ ಕಛೇರಿಯಲ್ಲಿ ಎದುರುದಾರರು ಹಾಜರಿದ್ದಲ್ಲಿ ಅವರಿಗೆ ಭೇಟಿಯಾಗಿ ಮೊದಲು ತಮ್ಮ ಸಬ್ಸಿಡಿ ಚೆಕ್ ಬಗ್ಗೆ ಮಾತನಾಡಿ, ಹಣ ಕೊಡಲು ಅಥವಾ ಅಕ್ಬರ್‌ರವರ ಕೈಯಲ್ಲಿ ಹಣ ಕೊಡಲು ಸೂಚಿಸಿದರೆ ಅಕ್ಬರ್‌ಗೆ ಲಂಚದ ಹಣ ಕೊಡಲು ಅಥವಾ ಒಂದು ವೇಳೆ ಎದುರುದಾರರು ಕಛೇರಿಯಲ್ಲಿರದೇ ಇದ್ದಲ್ಲಿ ಅಕ್ಬರ್ ಇವರಿಗೆ ಭೇಟಿಯಾಗಿ ಮೊದಲು ತಮ್ಮ ಚೆಕ್ ಬಗ್ಗೆ ಮಾತನಾಡಿ ಅವರು ಕೇಳಿದರೆ ಲಂಚದ ಹಣವನ್ನು ಕೊಡುವಂತೆ ಹಾಗೂ ಲಂಚದ ಹಣವನ್ನು ಅವರು ಪಡೆದು ಎಲ್ಲಿಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ಕೇಳಿದಾಗ ತಿಳಿಸಬೇಕೆಂದು ಮತ್ತು ಅವರು ಹಣವನ್ನು ಪಡೆದುಕೊಂಡ ನಂತರ ಕರ್ಚೀಫ್‌ನಿಂದ ಮುಖ ಒರೆಸಿಕೊಳ್ಳುವುದರ ಮೂಲಕ ಸಂಜ್ಞೆ ಮಾಡುವಂತೆ ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

15. ತನಿಖಾಧಿಕಾರಿಯವರು ದೂರುದಾರರಿಗೆ ತಮ್ಮ ಇಲಾಖೆಯ ವಾಯ್ಸ್ ರೆಕಾರ್ಡರ್ ನೀಡಿ, ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿಕೊಟ್ಟು, ಎದುರುದಾರರಿಗೆ ಹಣ ಕೊಡಲು ಹೋದಾಗ ವಾಯ್ಸ್ ರೆಕಾರ್ಡರ್‌ನ್ನು ಆನ್ ಮಾಡಿಕೊಂಡು ಹೋಗಿ, ಅವರೊಂದಿಗೆ ಜರುಗುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳುವಂತೆ ತಿಳಿಸಿರುತ್ತಾರೆ.

16. ಪಂಚಸಾಕ್ಷಿ-1 ರವರಿಗೆ, ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗಿ ಅಲ್ಲಿ ಜರುಗುವ ಘಟನೆಗಳನ್ನು ಗಮನಿಸಿ, ಕೇಳಿದಾಗ ಹೇಳುವಂತೆ ಹಾಗೂ ಪಂಚಸಾಕ್ಷಿ-2 ರವರಿಗೆ ತಮ್ಮ ಜೊತೆಯಲ್ಲಿರುವಂತೆ ತಿಳಿಸಿ ಉಳಿದ ಎ.ಸಿ.ಬಿ. ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆಯನ್ನು ನೀಡಿ ಪಿನಾಪ್ತಲಿನ್ ಪುಡಿಯನ್ನು ಸವರಿದ ಸಿಬ್ಬಂದಿಯವರಿಗೆ ಕಛೇರಿಯಲ್ಲಿಯೇ ಇರುವಂತೆ ತಿಳಿಸಿರುತ್ತಾರೆ.

17. ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ತನಿಖಾಧಿಕಾರಿಯವರು ಕೆಲವು ಫೋಟೋಗಳನ್ನು ಇಲಾಖೆಯ ಡಿಜಿಟಲ್ ಕ್ಯಾಮಾರದಿಂದ ತಮ್ಮ ಸಿಬ್ಬಂದಿಯವರ ಮೂಲಕ ತೆಗೆಯಿಸಿರುತ್ತಾರೆ.

18. ಈ ಪ್ರಾಯೋಗಿಕ ಪಂಚನಾಮೆಯನ್ನು ಭ್ರಷ್ಟಾಚಾರ ನಿಗ್ರಹ ದಳದ ಠಾಣೆ ಗದಗ ಕಛೇರಿಯಲ್ಲಿ ದಿ: 26/05/2020 ರಂದು ಮುಂಜಾನೆ 10-15 ಘಂಟೆಯಿಂದ 11-35 ಘಂಟೆಯವರೆಗೆ ಜರುಗಿಸಿ ತಮ್ಮ ಸಿಬ್ಬಂದಿಯವರಿಂದ ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

19. ದಿನಾಂಕ 26/05/2020 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ತನಿಖಾಧಿಕಾರಿಯವರು ದೂರುದಾರರಿಗೆ ತಮ್ಮ ಬೈಕ್‌ನಲ್ಲಿ ಪಂಚ-1 ರವರಿಗೆ ಕರೆದುಕೊಂಡು ಜಿಲ್ಲಾ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ಕಛೇರಿಗೆ ಹೋಗಲು ತಿಳಿಸಿ, ಹಿಂದಿನಿಂದ ತನಿಖಾಧಿಕಾರಿಯವರು ತಮ್ಮ ಖಾಸಗಿ ಉಪಯೋಗಕ್ಕೆ ತಂದಿದ್ದ ಕಾರ್ ನಂ. ಕೆ.ಎ.29-ಎನ್-5797

ನೇದರಲ್ಲಿ ಪಂಚ-2 ಹಾಗೂ ತಮ್ಮ ಸಿಬ್ಬಂದಿಯವರಿಗೆ ಕರೆದುಕೊಂಡು ದೂರುದಾರರ ಬೈಕ್ ಹಿಂದಿನಿಂದ ಹೊರಟಾಗ ಸಮಯ 11-45 ಘಂಟೆಯಾಗಿದ್ದು, ಅವರಿಂದ ಸ್ವಲ್ಪ ಅಂತರದಲ್ಲಿ ಎಸಿಬಿ ಸರಕಾರಿ ವಾಹನದಲ್ಲಿ ಸಿಬ್ಬಂದಿ ಜನರು ಬಂದಿರುತ್ತಾರೆ.

20. ದೂರುದಾರರ ಬೈಕ್ ಹಾಗೂ ತನಿಖಾಧಿಕಾರಿಯವರ ಕಾರು ಮುಳಗುಂದ ನಾಕಾ ದಾಟಿ, ನ್ಯಾಯಾಲಯದ ಸಂಕೀರ್ಣದ ಹತ್ತಿರ ಬಂದಾಗ ತನಿಖಾಧಿಕಾರಿಯವರು ತಮ್ಮ ಕಾರನ್ನು ಹುಬ್ಬಳ್ಳಿ ರಸ್ತೆ ಬದಿಗೆ ನಿಲ್ಲಿಸಿರುತ್ತಾರೆ. ದೂರುದಾರರು ತಮ್ಮ ಬೈಕ್‌ನ್ನು ಚಲಾಯಿಸಿಕೊಂಡು ಜಿಲ್ಲಾ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ಕಛೇರಿಗೆ ಹೋಗಿ, ಕಛೇರಿಯ ಗೇಟ್ ಹೊರಗೆ ತಮ್ಮ ಬೈಕನ್ನು ನಿಲ್ಲಿಸಿ ಕಛೇರಿಯ ಒಳಗಡೆ ಹೋದಾಗ ಅವರನ್ನು ಅನುಸರಿಸಿಕೊಂಡು ಪಂಚ-1 ರವರೂ ಸಹ ಹೋಗಿದ್ದು, ಆಗ ಸಮಯ 11-55 ಘಂಟೆಯಾಗಿರುತ್ತದೆ. ಸದರಿ ಕಟ್ಟಡದ ನೆಲ ಮಹಡಿಯಲ್ಲಿರುವ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಕಛೇರಿಯ ಎಡಭಾಗದಲ್ಲಿರುವ ಮೆಟ್ಟಿಲುಗಳ ಮೂಲಕ ಜಿಲ್ಲಾ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ಕಛೇರಿಗೆ ಹೋಗಿ ಅಲ್ಲಿ ಎಡಭಾಗದಲ್ಲಿರುವ ಸಿಬ್ಬಂದಿಯ ಕೊಠಡಿಯ ಒಳಗೆ ಹೋದಾಗ ಅಲ್ಲಿ ಕೆಲವು ಸಾರ್ವಜನಿಕರು ತಮ್ಮ ಕೆಲಸಕ್ಕಾಗಿ ಬಂದಿದ್ದು, ದೂರುದಾರರು ಬಂದಿದ್ದನ್ನು ನೋಡಿ ಅಕ್ಬರ್‌ರವರು ತಮ್ಮ ಸೀಟಿನಿಂದ ಎದ್ದು ಹೊರಗಿನ ಹಾಲ್‌ಗೆ ಬಂದು ರೆಕಾರ್ಡ್ ರೂಂ ಹತ್ತಿರ ಕರೆದುಕೊಂಡು ಹೋಗಿ, ದೂರುದಾರರಿಗೆ ದುಡ್ಡು ತಂದಿರುವ ಬಗ್ಗೆ ವಿಚಾರಿಸಿ, ದುಡ್ಡನ್ನು ಎನ್ವಲಪ್‌ದಲ್ಲಿ ಹಾಕಿ ಕೊಡುವಂತೆ ತಿಳಿಸಿ, ತಮ್ಮ ಜೇಬಿನಲ್ಲಿದ್ದ ಎನ್ವಲಪ್ ತೆಗೆದು ದೂರುದಾರರಿಗೆ ಕೊಟ್ಟಾಗ ದೂರುದಾರರು ತಮ್ಮ ಪ್ಯಾಂಟಿನ ಮುಂಬದಿಯ ಬಲಭಾಗದ ಜೇಬಿನಲ್ಲಿದ್ದ ಲಂಚದ ಹಣವನ್ನು ತೆಗೆದು,

ಅಕ್ಬರ್‌ರವರು ಕೊಟ್ಟಿದ್ದ ಎನ್ವಲಪ್‌ನಲ್ಲಿ ಹಾಕಿ ಕೊಟ್ಟಾಗ ಅಕ್ಬರ್‌ರವರು ಆ ಕವರನ್ನು ತಮ್ಮ ಪ್ಯಾಂಟಿನ ಮುಂದಿನ ಎಡಭಾಗದ ಜೇಬಿನಲ್ಲಿಟ್ಟುಕೊಂಡಿರುತ್ತಾರೆ. ಈ ವಿದ್ಯಮಾನವನ್ನು ಪಂಚ-1 ರವರು ಸಿಬ್ಬಂದಿ ಕೊಠಡಿಯ ಬಾಗಿಲ ಹತ್ತಿರ ನಿಂತು ನೋಡಿರುತ್ತಾರೆ. ಲಂಚದ ಹಣವನ್ನು ಕೊಟ್ಟ ನಂತರ ದೂರುದಾರರು ಕೆಳಗೆ ಹೋಗಿ, ಜಿಲ್ಲಾ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ಕಛೇರಿಗೆ ಬರುವ ದಾರಿಯಲ್ಲಿ ವಾಚ್ ಮಾಡಿಕೊಂಡು ಕುಳಿತಿದ್ದ ತನಿಖಾಧಿಕಾರಿಯವರೊಂದಿಗೆ ದೂರುದಾರರು ತಮ್ಮ ಕರ್ಚಿಫ್‌ದಿಂದ ಮುಖ ವರೆಸಿಕೊಂಡು ಲಂಚದ ಹಣ ಕೊಟ್ಟ ಬಗ್ಗೆ ಸಿಗ್ನಲ್ ನೀಡಿದಾಗ ಪಂಚ-2ರವರೊಂದಿಗೆ ತನಿಖಾಧಿಕಾರಿಯವರು ಹಾಗೂ ಸಿಬ್ಬಂದಿಯವರು ಜಿಲ್ಲಾ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ಕಛೇರಿಗೆ ಬಂದಾಗ ದೂರುದಾರರು ಅವರೆಲ್ಲರಿಗೂ ಕರೆದುಕೊಂಡು ಬಂದು ಅಕ್ಬರ್‌ರವರಿಗೆ ತೋರಿಸಿ ಇವರು ತನಗೆ ಹೊರಗಿನ ಹಾಲ್‌ದಲ್ಲಿ ಕರೆದುಕೊಂಡು ಹೋಗಿ ಹಣವನ್ನು ಕವರ್‌ದಲ್ಲಿ ಹಾಕಿಸಿಕೊಂಡು ಪಡೆದ ಬಗ್ಗೆ ತಿಳಿಸಿರುತ್ತಾರೆ.

21. ಜಿಲ್ಲಾ ಅಲ್ಪ ಸಂಖ್ಯಾತ ಅಭಿವೃದ್ಧಿ ನಿಗಮದ ಕಛೇರಿಯಲ್ಲಿ ಜಿಲ್ಲಾ ವ್ಯವಸ್ಥಾಪಕರಾದ ಎದುರುದಾರರು ಹಾಜರ್ ಇರದೇ ಇದ್ದುದರಿಂದ ತನಿಖಾಧಿಕಾರಿಯವರು ಕೊಪ್ಪಳಕ್ಕೆ ಹೋಗಿದ್ದ ಪಿ.ಐ. ಶ್ರೀ ವೈ ಎಸ್. ಧರೆನಾಯ್ಕ ಇವರಿಗೆ ಫೋನ್ ಮಾಡಿ ಜಿಲ್ಲಾ ವ್ಯವಸ್ಥಾಪಕರಾದ ಎದುರುದಾರರು ಕೊಪ್ಪಳದ ಕಛೇರಿಯಲ್ಲಿರುವ ಬಗ್ಗೆ ಪರಿಶೀಲಿಸಲು ಸೂಚಿಸಿ ಎದುರುದಾರರು ಅಲ್ಲಿ ಇದ್ದರೆ ಗದಗ ಕಛೇರಿಗೆ ಕರೆದುಕೊಂಡು ಬರಲು ಸೂಚಿಸಿರುತ್ತಾರೆ.

22. ತನಿಖಾಧಿಕಾರಿಯವರು ಅಕ್ಬರ್‌ಸಾಬ ಇವರಿಗೆ ತಮ್ಮ ಗುರುತಿನ ಚೀಟಿಯನ್ನು ತೋರಿಸಿ ಪಂಚರ ಹಾಗೂ ಸಿಬ್ಬಂದಿಯವರ ಪರಿಚಯ ಮಾಡಿಸಿ ದೂರುದಾರರು ನೀಡಿದ ದೂರಿನ ಮೇರೆಗೆ ಎದುರುದಾರರ ವಿರುದ್ಧ ಪ್ರತಿಬಂಧಕ ಕಾಯ್ದೆಯಡಿಯಲ್ಲಿ ಎ.ಸಿ.ಬಿ. ಗದಗದಲ್ಲಿ ಪ್ರಕರಣ ದಾಖಲಾಗಿರುತ್ತದೆ ಎಂದು ತಿಳಿಸಿ ಪ್ರಕರಣದ ತನಿಖೆಗೆ ಸಹಕರಿಸಲು ತಿಳಿಸಿರುತ್ತಾರೆ.

23. ತನಿಖಾಧಿಕಾರಿಯವರು ಅಕ್ಬರ್‌ಸಾಬ ರವರಿಗೆ ದೂರುದಾರರಿಂದ ಪಡೆದ ಲಂಚದ ಹಣ ಇರುವ ಎನ್ವಲಪ್‌ಅನ್ನು ಎಲ್ಲಿ ಇಟ್ಟುಕೊಂಡಿರುವಿರಿ ಅಂತ ಕೇಳಿದಾಗ ಅವರು ತಮ್ಮ ಪ್ಯಾಂಟಿನ ಮುಂದಿನ ಎಡಜೇಬಿನಲ್ಲಿಟ್ಟುಕೊಂಡಿರುವುದಾಗಿ ತಿಳಿಸಿದಾಗ ತನಿಖಾಧಿಕಾರಿಯವರು ಅಕ್ಬರ್‌ಸಾಬ ಈತನಿಗೆ ಟ್ರ್ಯಾಪ್ ಮಾಡಿರುವ ವಿಷಯವನ್ನು ಡಿ.ಎಸ್.ಪಿ. ರವರಿಗೆ ಫೋನ್ ಮೂಲಕ ತಿಳಿಸಿದಾಗ ಅವರೂ ಸಹ ಘಟನಾ ಸ್ಥಳಕ್ಕೆ ಬಂದು ಟ್ರ್ಯಾಪ್ ಬಗ್ಗೆ ತನಿಖಾಧಿಕಾರಿಯವರಿಂದ ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ.

24. ನಂತರ ತನಿಖಾಧಿಕಾರಿಯವರು ಸೂಚಿಸಿದಂತೆ ಅಕ್ಬರ್‌ಸಾಬ ಇವರು ತಮ್ಮ ಕೈಗಳನ್ನು ತಯಾರಿಸಿಟ್ಟಿದ್ದ ಎರಡು ಸೋಡಿಯಂ ಕಾರ್ಬೋನೇಟ್ ದ್ರಾವಣದ ಬಟ್ಟಲುಗಳಲ್ಲಿ ಪ್ರತ್ಯೇಕವಾಗಿ ಅದ್ದಿ ತೊಳೆದುಕೊಂಡಾಗ ಎರಡೂ ಕೈಗಳನ್ನು ಅದ್ದಿ ತೊಳೆದುಕೊಂಡ ಎರಡೂ ಬಟ್ಟಲುಗಳಲ್ಲಿಯ ದ್ರಾವಣದ ಬಣ್ಣ ಪರಿವರ್ತನೆಯಾಗಿರುವುದಿಲ್ಲ.

25. ತನಿಖಾಧಿಕಾರಿಯವರು ಪಂಚ-1 ರವರಿಗೆ ಅಕ್ಬರ್‌ಸಾಬ ಇವರು ಧರಿಸಿದ್ದ ಪ್ಯಾಂಟಿನ ಮುಂದಿನ ಎಡಭಾಗದ ಜೇಬಿನಿಂದ ಲಂಚದ ಹಣ ಇದ್ದ ಕವರನ್ನು ತೆಗೆಯಲು ಸೂಚಿಸಿದಾಗ ಅವರು ಅಕ್ಬರ್‌ಸಾಬ ಇವರ ಪ್ಯಾಂಟಿನ ಮುಂದಿನ ಎಡಭಾಗದ ಜೇಬಿನಿಂದ ಒಂದು ಕವರನ್ನು ತೆಗೆದು ಹಾಜರುಪಡಿಸಿದಾಗ ತನಿಖಾಧಿಕಾರಿಯವರ ಸೂಚನೆಯಂತೆ ಸದರಿ ಕವರ್‌ನಲ್ಲಿದ್ದ 2000/- ರೂ. ಮುಖಬೆಲೆಯ ನೋಟುಗಳನ್ನು ಎಣಿಕೆ ಮಾಡಿದ್ದು ಅವು 20 ನೋಟುಗಳಾಗಿದ್ದು ಸದರಿ ನೋಟುಗಳ ನಂಬರ್‌ಗಳನ್ನು ಪಂಚ-1 ರವರು ಓದಿ ಹೇಳಿದಂತೆ ಪಂಚ-2 ರವರು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಬರೆದುಕೊಂಡ ಹಾಳೆಯೊಂದಿಗೆ ತಾಳೆ ಮಾಡಿ ನೋಡಿ ತಾಳೆಯಾಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಸದದಿ ನೋಟುಗಳನ್ನು ಮುಂದಿನ ತನಿಖೆಗಾಗಿ ಅಮಾನತ್ತುಪಡಿಸಿಕೊಂಡಿರುತ್ತಾರೆ.

26. ಲಂಚದ ಹಣ ಇಟ್ಟಿದ್ದ ಕವರ್ ಮೇಲೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ನಂಬರ್ 12ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-1 ಎಂದು ಸೀಲು ಹಾಕಿದ್ದು, ತನಿಖಾಧಿಕಾರಿಯವರ ಸಿಬ್ಬಂದಿಯು ಒಂದು ಬಾಲ್ ಪೆನ್‌ಗೆ ಅರಳೆ (ಕಾಟನ್) ಸುತ್ತಿ ಅರಳೆಯಿಂದ ಸದರಿ ಎನ್ವಲಪ್‌ನ ಒಳ ಭಾಗವನ್ನು ವರೆಸಿ ತಯಾರಿಸಿಟ್ಟಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದ ಇನ್ನೊಂದು ಬಟ್ಟಲಿನಲ್ಲಿ ಅದ್ದಿ ತೊಳೆದಾಗ ದ್ರಾವಣದ ಬಣ್ಣವು ಅತೀ ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ದ್ರಾವಣ, ಕಾಟನ್ ಹಾಗೂ ಲಂಚದ ಹಣ ಇಟ್ಟಿದ್ದ ಎನ್ವಲಪ್‌ನ್ನು ತನಿಖಾಧಿಕಾರಿಯವರು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ.

27. ಅಕ್ಬರ್‌ಸಾಬ ಇವರು ಧರಿಸಿದ್ದ ಪ್ಯಾಂಟಿನಿಂದ ಹಣ ಇದ್ದ ಕವರ್‌ನ್ನು ತೆಗೆದು ಅದರಲ್ಲಿಯ ನೋಟುಗಳನ್ನು ಹಾಜರುಪಡಿಸಿದ ಪಂಚ-1 ರವರು ತನಿಖಾಧಿಕಾರಿಯವರ ಸೂಚನೆಯಂತೆ ತಯಾರಿಸಿಟ್ಟಿದ್ದ ಇನ್ನೂ ಎರಡು ಸೋಡಿಯಂ ಕಾರ್ಬೋನೇಟ್ ದ್ರಾವಣದ ಬಟ್ಟಲುಗಳಲ್ಲಿ ತಮ್ಮ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಅದ್ದಿ ತೊಳೆದುಕೊಂಡಾಗ ಬಟ್ಟಲುಗಳಲ್ಲಿಯ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ.

28. ದೂರುದಾರರ ಎರಡೂ ಕೈಗಳನ್ನು ತಯಾರಿಸಿಟ್ಟ ಇನ್ನೂ ಎರಡು ಸೋಡಿಯಂ ಕಾರ್ಬೋನೇಟ್ ದ್ರಾವಣದ ಬಟ್ಟಲುಗಳಲ್ಲಿ ಅದ್ದಿ ತೊಳೆಯಿಸಿದಾಗ ದೂರುದಾರರು ತಮ್ಮ ಬಲಗೈಯನ್ನು ಅದ್ದಿ ತೊಳೆದ ದ್ರಾವಣದ ಬಣ್ಣ ಅತೀ ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಎಡಗೈ ಅದ್ದಿ ತೊಳೆದ ದ್ರಾವಣದ ಬಣ್ಣ ಬದಲಾವಣೆಯಾಗಿರುವುದಿಲ್ಲ.

29. ತನಿಖಾಧಿಕಾರಿಯವರು ದೂರುದಾರರಿಗೆ ನಡೆದ ಘಟನೆಯ ಬಗ್ಗೆ ವಿಚಾರಿಸಿದಾಗ ಅವರು ನಡೆದಿದ್ದನ್ನು ಸವಿಸ್ತಾರವಾಗಿ ನುಡಿದು ಅಕ್ಬರ್‌ಸಾಬ ಇವರೊಂದಿಗೆ ಮಾತನಾಡಿದ ಸಂಭಾಷಣೆಯು ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಆಗಿರುತ್ತದೆ ಎಂದು ಹೇಳಿ ವಾಯ್ಸ್ ರೆಕಾರ್ಡರನ್ನು ಹಾಜರುಪಡಿಸಿದಾಗ ತನಿಖಾಧಿಕಾರಿಯವರು ವಾಯ್ಸ್ ರೆಕಾರ್ಡರ್‌ನ್ನು ಲಾಪ್‌ಟಾಪ್‌ಗೆ ಕನೆಕ್ಟ್ ಮಾಡಿ ಅದರಲ್ಲಿ ರೆಕಾರ್ಡ್ ಆದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ ಸಂಭಾಷಣೆಯ ಭಾಗವನ್ನು ಲ್ಯಾಪ್‌ಟಾಪ್ ಮೂಲಕ ಸಿ.ಡಿ.ಗೆ ಕಾಪಿ ಮಾಡಿಕೊಂಡು ಅದನ್ನು ಮುಂದಿನ ತನಿಖೆಗಾಗಿ ಅಮಾನತ್ತುಪಡಿಸಿಕೊಂಡಿರುತ್ತಾರೆ.

30. ತನಿಖಾಧಿಕಾರಿಯವರು ಅಕ್ಬರ್‌ಸಾಬ ರವರಿಗೆ ದೂರುದಾರರಿಂದ ಲಂಚದ ಹಣ ಪಡೆದ ಬಗ್ಗೆ ತಮ್ಮ ವಿವರಣೆಯನ್ನು ಬರೆದುಕೊಡಲು ತಿಳಿಸಿದಾಗ ಅವರು ತಮ್ಮ ವಿವರಣೆಯನ್ನು ಬರೆದುಕೊಟ್ಟಿದ್ದು, ಅದರಲ್ಲಿ "ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಟ್ಯಾಕ್ಸಿ/ಗೂಡ್ಸ್ ಫಲಾನುಭವಿಗಳ ವ್ಯಕ್ತಿಯೊಬ್ಬರು ದಿಡೀರನೆ ಆಫೀಸಿಗೆ ಬಂದು ದುಡ್ಡು ಕೊಟ್ಟು ತಮ್ಮ ಕೆಲಸವನ್ನು ಬೇಗನೆ ಮಾಡಲು ಹೇಳಿರುತ್ತಾರೆ ಮತ್ತು ಅವರು 40,000/- ಕೊಟ್ಟಿರುತ್ತಾರೆ ಎಂದು ಹೇಳಿರುತ್ತೇನೆ" ಎಂದು ಬರೆದುಕೊಟ್ಟ ಲಿಖಿತ ವಿವರಣೆಯ ಬಗ್ಗೆ ದೂರುದಾರರಿಗೆ ವಿಚಾರಿಸಿದಾಗ ಅವರು ಅಕ್ಬರ್‌ಸಾಬ ಹಾಗೂ ಅವರ ಮೇಲಾಧಿಕಾರಿಯಾದ ಎದುರುದಾರರು ಟ್ಯಾಕ್ಸಿ ಸಾಲದ ಸಬ್ಸಿಡಿ ರೂ. 3,00,000/- ಗಳ ಚೆಕ್ ನೀಡಲು ರೂ.40,000/- ತಂದುಕೊಡಲು ತಿಳಿಸಿರುವುದು ತನ್ನ ಮೊಬೈಲ್‌ದಲ್ಲಿ ರೆಕಾರ್ಡ್ ಆಗಿದ್ದು, ಅಲ್ಲದೆ ಲಂಚದ ಹಣ ಕೊಡಲು ಇವತ್ತು ಅವರ ಕಛೇರಿಗೆ ಬಂದಾಗಲೂ ಸಹ ನಾನು ದುಡ್ಡು ತಂದಿರುವ ಬಗ್ಗೆ ವಿಚಾರಿಸಿ ಹಣವನ್ನು ಎನ್ವಲಪ್‌ದಲ್ಲಿ ಹಾಕಿಸಿ ಪಡೆದುಕೊಂಡಿರುತ್ತಾರೆ ಆ ಸಂಭಾಷಣೆಯನ್ನೂ ಸಹ ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದನ್ನು ಪಂಚರು ಕೇಳಿಸಿಕೊಂಡಿರುತ್ತಾರೆ. ನಾನು ಸಬ್ಸಿಡಿ ಹಣದ ಚೆಕ್‌ಗಾಗಿ ಸುಮಾರು 2 ವರ್ಷದಿಂದ ಕಾಯುತ್ತಿದ್ದು ಲಂಚದ ಹಣ ಕೊಟ್ಟರಷ್ಟೆ ಚೆಕ್ ಕೊಡುವುದಾಗಿ ಹೇಳಿರುತ್ತಾರೆ. ಅಕ್ಬರ್‌ಸಾಬರವರು ತಮ್ಮ ವಿವರಣೆಯಲ್ಲಿ ತಿಳಿಸಿದಂತೆ ನಾನೇ ಬಂದು ಸ್ವ ಇಚ್ಛೆಯಿಂದ ಅವರಿಗೆ ದುಡ್ಡು ಕೊಟ್ಟಿರುವುದಿಲ್ಲ ಎಂದು ಹೇಳಿರುತ್ತಾರೆ.

31. ನಂತರ ತನಿಖಾಧಿಕಾರಿಯವರು ಅಕ್ಬರ್ ಸಾಬ ರವರ ವಿವರಣೆ ಬಗ್ಗೆ ಪಂಚರಿಗೆ ಕೇಳಿದಾಗ ಅವರು "ಆಪಾದಿತರುಗಳ ಲಂಚದ ಬೇಡಿಕೆಯು

ರೆಕಾರ್ಡ್ ಆಗಿದ್ದು, ಆ ಸಂಭಾಷಣೆಯನ್ನು ನಾವು ಕೇಳಿರುತ್ತೇವೆ ಲಂಚದ ಹಣ ಕೊಡುವಾಗ ಸಹ ಅಕ್ಬರ್‌ಸಾಬ ಹಳೇಮಸೂತಿ ಇವರ ಮತ್ತು ದೂರುದಾರರ ಮಧ್ಯೆ ಜರುಗಿದ ಸಂಭಾಷಣೆಯನ್ನೂ ಸಹ ನಾವು ಕೇಳಿರುತ್ತೇವೆ. ಅಕ್ಬರ್‌ಸಾಬ ಹಳೆಮಸೂತಿ ಇವರು ತಮ್ಮ ಆಫೀಸದ ರೆಕಾರ್ಡ್ ರೂಂ ಹತ್ತಿರ ಬಂದು ದೂರುದಾರರಿಂದ ಎನ್ವಲಪ್‌ದಲ್ಲಿ ಲಂಚದ ಹಣ ಹಾಕಿಸಿಕೊಂಡು ತಮ್ಮ ಪ್ಯಾಂಟ್ ಜೇಬಿನಲ್ಲಿಟ್ಟುಕೊಂಡಿರುವುದನ್ನು ಪಂಚ ಸಾಕ್ಷಿ-1 ವಿ.ಬಿ. ದಾಸರಿ ಆದ ನಾನು ಗಮನಿಸಿರುವುದಾಗಿ" ತಿಳಿಸಿರುತ್ತಾರೆ.

32. ಮಧ್ಯಾಹ್ನ 2-00 ಘಂಟೆಗೆ ಪಿ.ಐ. ಶ್ರೀ ವೈ.ಎಸ್. ಧರನಾಯ್ಕ ಇವರು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಗದಗ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರಾದ ಎದುರುದಾರರನ್ನು ಕರೆದುಕೊಂಡು ಬಂದು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿ ಶ್ರೀ ವೈ.ಎಸ್. ಧರನಾಯ್ಕರವರು ತಾನು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಕೊಪ್ಪಳ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರ ಕಛೇರಿಗೆ ಹೋಗಿ ಅಲ್ಲಿ ತಮ್ಮ ಪರಿಚಯ ಮಾಡಿಸಿಕೊಂಡು ಎದುರುದಾರರಿಗೆ ಅವರ ವಿರುದ್ಧ ದಾಖಲಾಗಿರುವ ಪ್ರಕರಣದ ಬಗ್ಗೆ ವಿವರಿಸಿ ಕರೆದುಕೊಂಡು ಬಂದಿರುವುದಾಗಿ ತಿಳಿಸಿರುತ್ತಾರೆ.

33. ತನಿಖಾಧಿಕಾರಿಯವರು ಎದುರುದಾರರಿಗೆ ಪಂಚರಿಬ್ಬರನ್ನು ಹಾಗೂ ಸಿಬ್ಬಂದಿಯವರ ಪರಿಚಯ ಮಾಡಿಸಿ ದೂರುದಾರರ ಟ್ಯಾಕ್ಸಿ/ಗೂಡ್ಸ್ ವಾಹನ ಖರೀದಿ ಯೋಜನೆಯ ಸಬ್ಸಿಡಿ ಚೆಕ್ ನೀಡಲು ರೂ.40,000/- ಲಂಚದ ಬೇಡಿಕೆ ಇಟ್ಟ ಬಗ್ಗೆ ದೂರುದಾರರು ನೀಡಿದ ದೂರಿನಂತೆ ಎ.ಸಿ.ಬಿ.

ಠಾಣೆಯಲ್ಲಿ ಪ್ರಕರಣ ದಾಖಲಾಗಿರುವ ಬಗ್ಗೆ ತಿಳಿಸಿ ಸದರಿ ಲಂಚದ ಹಣವನ್ನು ಅಕ್ಬರ್‌ಸಾಬ ಹಳೆಮಸೂತಿ ಇವರು ದೂರುದಾರರಿಂದ ಪಡೆದುಕೊಂಡಾಗ ಟ್ರ್ಯಾಪ್ ಮಾಡಲಾಗಿದೆ ಎಂದು ತಿಳಿಸಿ ಎದುರುದಾರರ ಹೆಸರು ವಿಳಾಸವನ್ನು ಕೇಳಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರಿಗೆ ತಮ್ಮ ವಿವರಣೆಯನ್ನು ಬರೆದುಕೊಡಲು ತಿಳಿಸಿದಾಗ ಎದುರುದಾರರು ತಮ್ಮ ವಿವರಣೆಯನ್ನು ಬರೆದುಕೊಟ್ಟಿದ್ದು ಅದರಲ್ಲಿ "ಮಾನ್ಯರೇ, ವಿಷಯ, ದಿನಾಂಕ 26/5/2020 ರಂದು ನಡೆದ ಎಸಿಬಿ ದಾಳಿ ಕುರಿತಂತೆ ಈ ಮೇಲಿನ ವಿಷಯ ಸಂಬಂಧಿಸಿದಂತೆ ನಾನು ಜಾಕೀರಹುಸೇನ ಕುಕನೂರ ಪ್ರಭಾರಿ ಜಿಲ್ಲಾ ವ್ಯವಸ್ಥಾಪಕ, ಕೊಪ್ಪಳ ಜಿಲ್ಲೆ ಹೆಚ್ಚುವರಿಯಾಗಿ ಗದಗ ಜಿಲ್ಲೆ ನಾನು ಇಂದು ದಿನಾಂಕ 26/5/2020 ರಂದು ಕೊಪ್ಪಳದ ಜಿಲ್ಲಾ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಗದಗ ಜಿಲ್ಲೆಯ ಎ.ಸಿ.ಬಿ. ಅಧಿಕಾರಿಗಳು ಕೊಪ್ಪಳ ಜಿಲ್ಲೆಯ ನನ್ನ ಕಛೇರಿಗೆ ಬಂದು ನಿಮ್ಮನ್ನು ಟ್ರ್ಯಾಪ್ ಮಾಡಿದ್ದೇವೆ ನಿಮ್ಮ ಕಛೇರಿಯ ಸಹಾಯಕರು ಎ.ಸಿ.ಬಿ. ದಾಳಿಗೆ ಒಳಗಾಗಿದ್ದಾನೆಂದು ನನ್ನನ್ನು ಗದಗ ಕಛೇರಿಗೆ ಕರೆ ತಂದಿರುತ್ತಾರೆ. ದಯವಿಟ್ಟು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ ನಾನು ಈ ಕೃತ್ಯದಲ್ಲಿ ಭಾಗಿಯಾಗಿಲ್ಲ ಹಾಗೂ ಫಲಾನುಭವಿಗಳಿಂದ ಹಣ ಪಡೆದಿಲ್ಲ. ಇಂದು ನಾನು ಗದಗದಲ್ಲಿ ಕಾರ್ಯನಿರ್ವಹಿಸಿರುವುದಿಲ್ಲ ಹೀಗಾಗಿ ಈ ಕೃತ್ಯಕ್ಕೆ ನಾನು ಸಂಪೂರ್ಣ ಜವಾಬ್ದಾರನಲ್ಲ, ದಯವಿಟ್ಟು ಇದರಿಂದ ಮುಕ್ತಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ" ಎಂದು ಬರೆದುಕೊಟ್ಟ ಲಿಖಿತ ವಿವರಣೆ ಬಗ್ಗೆ ತನಿಖಾಧಿಕಾರಿಯವರು ದೂರುದಾರರಿಗೆ ವಿಚಾರಿಸಿದಾಗ ಅವರು ದಿ: 21/5/2020 ರಂದು ಭೇಟಿಯಾಗಿ ಮಾತನಾಡಿದಾಗ ಸಬ್ಸಿಡಿ ಚೆಕ್ ನೀಡಲು 50,000/- ರೂ. ಕೊಡಲೇ ಬೇಕು ಎಂದು ಎರಡೂ ಜನರು ಕೇಳಿದ್ದು ರೆಕಾರ್ಡ್ ಆಗಿರುತ್ತದೆ ಇಂದು ಮಂಗಳವಾರ ಆಗಿದ್ದರಿಂದ

ಇವರು ಕೊಪ್ಪಳ ಆಫೀಸಿನಲ್ಲಿ ಹಾಜರಿರುತ್ತಾರೆ. ಎದುರುದಾರರು ಬರೆದುಕೊಟ್ಟಿರುವ ಲಿಖಿತ ವಿವರಣೆಯು ಸುಳ್ಳಾಗಿರುತ್ತದೆ ಎಂದು ಹೇಳಿರುತ್ತಾರೆ. ಎದುರುದಾರರು ಬರೆದುಕೊಟ್ಟ ವಿವರಣೆ ಬಗ್ಗೆ ಪಂಚರಿಗೆ ತನಿಖಾಧಿಕಾರಿಯವರು ವಿಚಾರಿಸಿದಾಗ ಅವರು ಎದುರುದಾರರು ಮತ್ತು ಅಕ್ಬರ್‌ಸಾಬರವರು ಲಂಚದ ಬೇಡಿಕೆ ಇಟ್ಟಿದ್ದು, ಸದರಿ ಲಂಚದ ಹಣವನ್ನು ಅಕ್ಬರ್‌ಸಾಬ ಹಳೇಮಸೂತಿ ಇವರು ಪಡೆದುಕೊಂಡಿದ್ದು ಮತ್ತು ಎದುರುದಾರರ ಲಿಖಿತ ವಿವರಣೆಯು ಸುಳ್ಳಾಗಿರುತ್ತದೆ ಎಂದು ಹೇಳಿರುತ್ತಾರೆ.

34. ದಿ: 21/5/2020 ರಂದು ಎದುರುದಾರರು ಮತ್ತು ಅಕ್ಬರ್‌ಸಾಬರವರು ಲಂಚದ ಬೇಡಿಕೆಯ ಸಂಬಂಧ ದೂರುದಾರರೊಂದಿಗೆ ಮಾತನಾಡಿದ ಸಂಭಾಷಣೆ ಹಾಗೂ ದಿನಾಂಕ 26/5/2020 ರಂದು ದೂರುದಾರರು ಮತ್ತು ಅಕ್ಬರ್‌ಸಾಬ ಹಳೇಮಸೂತಿ ಇವರ ಮಧ್ಯ ಜರುಗಿದ ಸಂಭಾಷಣೆಯ ಭಾಗವನ್ನು ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರಿಂದ ವಾಯ್ಸ್ ರೆಕಾರ್ಡರದಿಂದ ಲ್ಯಾಪ್‌ಟಾಪ್ ಮೂಲಕ ಸಿ.ಡಿ. ಒಂದಕ್ಕೆ ಕಾಪಿ ಮಾಡಿಸಿ ಆ ಸಿ.ಡಿ.ಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರನ್ನು ಹಾಗೂ ಅಕ್ಬರ್‌ಸಾಬ ರವರನ್ನು ದಸ್ತಗಿರಿ ನಿಯಮ ಪಾಲಿಸಿ ದಸ್ತಗಿರಿ ಮಾಡಿರುತ್ತಾರೆ.

35. ತನಿಖಾಧಿಕಾರಿಯವರ ಸೂಚನೆಯಂತೆ ಟ್ರ್ಯಾಪ್ ಪಂಚನಾಮೆ ಕಾಲಕ್ಕೆ ಅವರ ಸಿಬ್ಬಂದಿಯವರು ಎ.ಸಿ.ಬಿ. ಕಛೇರಿಯ ಡಿಜಿಟಲ್ ಕ್ಯಾಮಾರಾದಿಂದ ಕೆಲವು ಫೋಟೋಗಳನ್ನು ತೆಗೆದಿರುತ್ತಾರೆ. ಈ ಟ್ರ್ಯಾಪ್ ಪಂಚಾನಾಮೆಯನ್ನು ದಿ: 26/5/2020 ರಂದು ಮಧ್ಯಾಹ್ನ 12-05 ಘಂಟೆಯಿಂದ 3-00 ಘಂಟೆಯವರೆಗೆ ತನಿಖಾಧಿಕಾರಿಯವರು

ಉಕ್ತಲೇಖನ ಕೊಟ್ಟು ತಮ್ಮ ಸಿಬ್ಬಂದಿಯವರ ಮೂಲಕ ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

36. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

37. ಧ್ವನಿ ವಿಶ್ಲೇಷಣಾ ವರದಿ ಬರುವುದು ಬಾಕಿ ಇದ್ದು, ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

38. ನಂತರಎದುರುದಾರರಿಗೆ ದಿನಾಂಕ 20/07/2022 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 11/08/2022 ರಂದು ಸಲ್ಲಿಸಿರುತ್ತಾರೆ. ಎದುರುದಾರರು ಸಲ್ಲಿಸಿದ ಸಮಜಾಯಿಷಿಯನ್ನು ಪರಿಶೀಲಿಸಲಾಗಿ “ಎದುರುದಾರರು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ. 104508/2021 ರಂತೆ ರಿಟ್ ಪಿಟಿಷನ್‌ನನ್ನು ಸಲ್ಲಿಸಿ ಸದರಿ ಪ್ರಕರಣದಲ್ಲಿ ಎಸಿಬಿ ಪೋಲಿಸರು ದಾಖಲಿಸಿಕೊಂಡ ಕ್ರೈ.ನಂ.04/2021 ರಂದು ರದ್ದುಪಡಿಸುವಂತೆ ಕೋರಿ ಸಲ್ಲಿಸಿದ ರಿಟ್ ಪಿಟಿಷನ್‌ನ್ನು ಕರ್ನಾಟಕ ಉಚ್ಛನ್ಯಾಯಾಲಯವು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ ನಲ್ಲಿ ನಡೆಯುತ್ತಿರುವ ಸ್ಪೆಷಲ್ ಎಸ್.ವಿ.ಸಿ ಕೇಸ್ ನಂ. 05/2022 ನ್ನು ಸ್ಟೇ ಮಾಡಿರುತ್ತದೆ ಎಂದು ಹೇಳಿ ತಮ್ಮ

ಮೇಲಿನ ಆಪಾದನೆಗಳನ್ನು ನಿರಾಕರಿಸುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಎದುರುದಾರರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

39. ಎದುರುದಾರರು ತಮ್ಮ ಬಳಿ ಅಕ್ರಮ ಹಣ ಇಟ್ಟುಕೊಂಡು ಆ ಅಕ್ರಮ ಹಣದ ಸಾಕ್ಷ್ಯಾಧಾರವನ್ನು ಮರೆಮಾಚಲು ಪ್ರಯತ್ನಿಸಿ ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

40. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಜಾಕೀರ್‌ಹುಸೇನ್ ಕುಕನೂರ ತಂದೆ ರಾಜೇಸಾಬ, ಸರಕಾರಿ ಪ್ರೌಢಶಾಲಾ ಸಹ ಶಿಕ್ಷಕರು, ನಿಯೋಜನೆಯ ಮೇರೆಗೆ ಜಿಲ್ಲಾ ಅಧಿಕಾರಿಗಳು, ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಕಛೇರಿ, ಕೊಪ್ಪಳ ಜಿಲ್ಲೆ (ಹೆಚ್ಚುವರಿ ಪ್ರಭಾರ) ಗದಗ ಜಿಲ್ಲೆ (ನಿವೃತ್ತಿ ದಿ:31-5-2029) ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು

ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸು ಮಾಡಲಾಗಿದೆ.

41. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.